ದಿನಾಂಕಃ 30.01.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಪಾಟೀಸವಾಲುಃ ವಾದಿಯ ಪರ ವಕೀಲರಿಂದಃ

5. ಖರೀದಿ ಪತ್ರದ ಮಾತುಕತೆಯನ್ನು ಸೊಸಾಯಿಟಿಯಲ್ಲಿ ಮಾಡಿದ್ದೇವೆ. ಅದರ ಹೆಸರು ರೇಣುಕಾಚಾರ್ಯ ಸೊಸಾಯಿಟಿ. ಮಾತುಕತೆ ಮಾಡುವಾಗ 3 ಜನ ಇದ್ದರು. ಅವರ ಹೆಸರು ಕಂಬಿ, ನೇಗನಾಳ ಮತ್ತು ಪತ್ತಾರ ಆಗಿರುತ್ತವೆ. ಯಾವ ದಿನಾಂಕದಂದು ಮಾತುಕತೆ ಮತ್ತು ಖರೀದಿಯಾಯಿತು ಎಂದರೆ ಸಾಕ್ಷಿ ಮಾತುಕತೆಯನ್ನು 2018 ರಲ್ಲಿ ಆಗಿರುತ್ತವೆ ಎನ್ನುತ್ತಾರೆ. ನಿಖರವಾದ ದಿನ ಮತ್ತು ತಿಂಗಳು ಹೇಳಲು ಆಗುವುದಿಲ್ಲ. ಮಾತುಕತೆಯಾದ ದಿನ 1 ನೇ ಪ್ರತಿವಾದಿಗೆ 2 ಲಕ್ಷ ಹಣವನ್ನು ಕೊಟ್ಟಿದ್ದೇವೆ. ಇದನ್ನು ತೋರಿಸುವ ದಾಖಲೆಯನ್ನು ನಾನು ಹಾಜರು ಪಡಿಸಿಲ್ಲ. 13 ಲಕ್ಷ 25 ಸಾವಿರ ಹಣವನ್ನು ಪಂಚಾಚಾರ್ಯ ಸೊಸಾಯಿಟಿಯಿಂದ ತಂದು ಕೊಟ್ಟಿದ್ದೇನೆ. ಈ ರೀತಿ ಕೊಟ್ಟ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿಲ್ಲ. ದಾಖಲೆಗಳು ಇವೆ. ಸದರಿ ಹಣ ಕೊಟ್ಟ ಬಗ್ಗೆ ಯಾವುದೇ ದಾಖಲೆ ಬರೆಸಿಕೊಂಡಿಲ್ಲ, ಹಿರಿಯರ ಸಮಕ್ಷಮ ಕೊಟ್ಟಿದ್ದೇನೆ. ರೇಣುಕಾಚಾರ್ಯ ಸೊಸಾಯಿಟಿಗೆ ಅನುಕೂಲವಾಗಲಿ ಎಂದು ಖರೀದಿಪತ್ರವನ್ನು ನಾವು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

6. ವಾದಿ ಪುಂಡಲೀಕರವರು 1 ನೇ ಪ್ರತಿವಾದಿಗೆ ದಿಃ 24.01.2018 ರಂದು 3 ಚೆಕ್‌ಗಳ ಮೂಲಕ 15 ಲಕ್ಷ ಹಣವನ್ನು ಕೊಟ್ಟಿರುತ್ತಾರೆ ಎಂಬ ವಿಚಾರ ನನಗೆ ಗೊತ್ತಿಲ್ಲ. ಅವು ಎಕ್ಸೀಸ್ ಬ್ಯಾಂಕ್ ನನ್ನ ಚೆಕ್‌ಗಳು ಎಂಬುವುದರ ಬಗ್ಗೆ ನನಗೆ ಗೊತ್ತಿಲ್ಲ. ದಿಃ 24.01.2018 ರಂದು 1 ನೇ ಪ್ರತಿವಾದಿ ವಾದಿಗೆ ಕ್ರಯದ ಕರಾರುಪತ್ರ ಬರೆದುಕೊಟ್ಟಿದ್ದಾರೆ ಎಂಬುವುದರ ಬಗ್ಗೆ ನನಗೆ ಗೊತ್ತಿಲ್ಲ. ನಾವು ಖರೀದಿ ಪತ್ರ ಮಾಡಿಕೊಳ್ಳುವ 15 ದಿವಸಗಳ ಮೊದಲು ಅವರು ಖರೀದಿ ಕರಾರುಪತ್ರ ಮಾಡಿಕೊಂಡಿದ್ದಾರೆ ಎಂಬುವುದರ ಬಗ್ಗೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ನಾವು ಯಾವತ್ತೂ 13 ಲಕ್ಷ 25 ಸಾವಿರ ಹಣವನ್ನು ಕೊಟ್ಟಿಲ್ಲ, ಸುಳ್ಳು ಖರೀದಿ ಪತ್ರವನ್ನು ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಅವರಿಗೆ ಹೆದರಿಸಿ, ಬೆದರಿಸಿ ಸುಳ್ಳು ಖರೀದಿ

ಪತ್ರವನ್ನು ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ವಾದಿ ಖರೀದಿ ಕರಾರುಪತ್ರ ಮಾಡಿಕೊಂಡಿರುವ ವಿಚಾರ ನಮಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸುಳ್ಳಾಗಿದ್ದು, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಕೆ ಎಮ್ ಶಂಕರ್)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ